ಅಧ್ಯಕ್ಷರು :- ಇಲ್ಲಿಗೆ ಈ ವಿಷಯವನ್ನು ಮುಕ್ತಾಯಗೊಳಿಸುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. ಮುಂದೆ ಚರ್ಚಿಸುವುದಕ್ಕೆ ನಾನು ಅವಕಾಶ ಕಲ್ಪಿಸಿಕೊಡುವುದಿಲ್ಲ. No more discussion.

4. ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1. ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ)

(ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನೆ ಪ್ರಸ್ತಾವ

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ ಅಡಿಯಲ್ಲಿ ಈ ಹಿಂದೆ ಇದ್ದಂತೆ ದೇವದಾಸಿಯರ ಸಮರ್ಪಣಾ ಕಾರ್ಯಕ್ರಮ ಮತ್ತು ಅದರ ಪ್ರಚೋದನೆಗೆ ಇದ್ದಂತಹ ಒಂದು ಕಾನೂನು ಈಗ ವಿಶೇಷವಾಗಿ 2009ರ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕದ ಅಡಿಯಲ್ಲಿ ತಂದು non-bailable offence ಆಗಿ ನಾವು ಪರಿವರ್ತಿಸಿದ್ದೇವೆ. ಇದರಿಂದಾಗಿ ಈ ಕಾನೂನಿನಡಿ ದೇವದಾಸಿಯರ ಸಮರ್ಪಣಾ ಪ್ರಚೋದನೆಗೆ ಮತ್ತು ಅದರ ಆಚರಣೆಗೆ ನೆರವಾಗುವ ಯಾವುದೇ ವ್ಯಕ್ತಿ ಇರಲಿ ಅಥವಾ ಯಾವುದೇ ಸಂಘಟನೆ ಇರಲಿ, ಅಂತಹವರಿಗೆ ಕನಿಷ್ಠ 2 ವರ್ಷಗಳ ಸಜೆ ಅಥವಾ ಶಿಕ್ಷೆ ಇದ್ದು, ಗರಿಷ್ಠ 3 ವರ್ಷಗಳ ತನಕ ಶಿಕ್ಷೆ ವಿಧಿಸಬಹುದಾಗಿದೆ. 2,000 ರೂ. ದಂಡದಿಂದ ಹಿಡಿದು 10,000 ರೂ.ಗಳವರೆಗೆ ದಂಡ ವಿಧಿಸುವ ಹೊಸ ವಿಧೇಯಕ ಇದಾಗಿದ್ದು, ಇದನ್ನು non-bailable offence ಆಗಿ ಮಾರ್ಪಡಿಸಲಾಗಿದೆ. ಸಭೆಯು ವಿಧೇಯಕವನ್ನು ಅನುಮೋದಿಸಬೇಕೆಂದು ಕೋರುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) :- ಮಾನ್ಯ ಸಭಾಧ್ಯಕ್ಷರೆ, ಸರ್ಕಾರವು ಮಸೂದೆಗೆ ತಿದ್ದುಪಡಿ ತಂದಿದೆ. ಬಹುಶಃ, ಇದರ ಬಗ್ಗೆ ಈಗಾಗಲೇ ಸಾಕಷ್ಟು standing orders ಇದ್ದವು. ಆ Standing Orders ಅನ್ನು ನಾವು ಸರಿಯಾದ ರೀತಿಯಲ್ಲಿ ಜಾರಿಗೊಳಿಸಿದ್ದರೆ, ಸರಿಯಾದ ರೀತಿಯಲ್ಲಿ ಜಾರಿಗೆ ಕೊಟ್ಟಿದ್ದರೆ, ಅದರಲ್ಲೇ ಇದನ್ನು ಮಾಡಬಹುದಾಗಿತ್ತು. ಇದನ್ನು ಜಾಮೀನುರಹಿತವಾಗಿ ಮಾರ್ಪಡಿಸಿದ್ದಾರೆ. ಅನಂತರ, ಅವರು ಕಾನೂನಿಗೆ ತಂದಿರುವ ತಿದ್ದುಪಡಿಯಲ್ಲಿ 3(ಎ)ನಲ್ಲಿ ಏನು ಹೇಳುತ್ತಾರೆಂದರೆ, "....ಅಧಿನಿಯಮವನ್ನು ಉಲ್ಲಂಘಿಸಿ ಸಮರ್ಪಣೆಯನ್ನು ವ್ಯವಸ್ಥೆ ಮಾಡಲಾಗಿದೆ ಅಥವಾ ಅದನ್ನು ಇನ್ನೇನು ವಿದ್ಯುಕ್ತಗೊಳಿಸಲಿದ್ದಾರೆ ಎಂದು ಮನಗಂಡರೆ ಅಂಥ ಮ್ಯಾಜಿಸ್ಟ್ರೇಟನು ಒಂದು ಸಂಸ್ಥೆಯ ಅಥವಾ ವ್ಯಕ್ತಿಗಳ ಸಂಘದ ಒಬ್ಬ ಸದಸ್ಯನೂ ಸೇರಿದಂತೆ ಯಾವನೇ ವ್ಯಕ್ತಿಯ ವಿರುದ್ಧ ಅಂಥ ಸಮರ್ಪಣೆಯನ್ನು ನಿಷೇಧಿಸಿ ಅಥವಾ ನಿಗ್ರಹಿಸಿ ಒಂದು ನಿಷೇಧಕ ನಿರ್ಬಂಧಕಾಜ್ಞೆಯನ್ನು ಹೊರಡಿಸತಕ್ಕದ್ದುಖ ಎಂದು ಇದೆ. ಇಲ್ಲಿ ಸಂಸ್ಥೆ ಅಥವಾ ಸಂಸ್ಥೆಯ ಸದಸ್ಯರು ಎಂಬ ಪದ ಬಳಸಿದ್ದಾರೆ. ಆದರೆ, ವಿವ್ಯಕ್ತಿಖ ಎನ್ನುವ ಪದವನ್ನು ಎಲ್ಲಿಯೂ ಬಳಸಿಲ್ಲ. "Individual" ಎನ್ನುವ ಪದವನ್ನು ಎಲ್ಲೆಯೂ ಬಳಸಿಲ್ಲ. ಆದುದರಿಂದ, ಇದನ್ನು ಕೂಡ ಅದರಲ್ಲಿ ನಿರ್ದಿಷ್ಟವಾಗಿ ಸೇರಿಸಬೇಕಾಗುತ್ತದೆ.

ಅನಂತರ, ದೇವದಾಸಿ ಪದ್ಧತಿಗೆ ಯಾರಾದರೂ ಪ್ರಚೋದನೆ ಕೊಡುತ್ತಿದ್ದರೆ, ಆ ಪ್ರಚೋದನೆ ಕೊಡುವ ವ್ಯಕ್ತಿಯ ಬಗ್ಗೆ ಕೂಡ ನಿರ್ದಿಷ್ಟವಾದ ವಿಷಯವು ಇದರಲ್ಲಿ ಸೇರ್ಪಡೆಯಾಗಿಲ್ಲದಿರುವುದರಿಂದ ಅದನ್ನೂ ಸೇರಿಸಬೇಕಾಗುತ್ತದೆ. ಜೊತೆಗೆ, ನನಗೆ ಗೊತ್ತಿರುವಂತೆ ಈ ಕಾನೂನಿನಡಿ ಈಗಾಗಲೇ ಸುಮಾರು 47 ಕೇಸ್‌ಗಳು ರಿಜಿಸ್ಟರ್ ಆಗಿವೆ. ಈ ಪೈಕಿ ಶಿಕ್ಷೆಯಾಗಿರುವುದು ಕೇವಲ 2 ಪ್ರಕರಣಗಳಲ್ಲಿ ಮಾತ್ರ. ಉಳಿದಂತೆ 45 ಪ್ರಕರಣಗಳು ಖುಲಾಸೆಯಾಗಿವೆ. ಆದುದರಿಂದ, ದಯವಿಟ್ಟು ಇನ್ನೂ ಬಿಗಿಯಾದ ನಿರ್ಬಂಧವನ್ನು ಈ ಕಾನೂನಿನ ತಿದ್ದುಪಡಿಯಲ್ಲಿ ಸೇರಿಸಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ :- ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರ ಹೇಳಿಕೆ ಪ್ರಕಾರ ಸರ್ಕಾರ ದೇವದಾಸಿ ಆಚರಣೆಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಬೇರು ಮಟ್ಟದಿಂದ ಕಿತ್ತು ಹಾಕಬೇಕಾದ ಬದ್ಧತೆಯಿಂದ ಸ್ಪಷ್ಟವಾದ, ವಿಶೇಷವಾದ ಕಾನೂನನ್ನು ಜಾರಿಗೆ ತರುವುದಕ್ಕೆ ಹೊರಟಿದೆ. ನಿಯಮಗಳನ್ನು ರೂಪಿಸುವ ಸಂದರ್ಭದಲ್ಲಿ ತಾವು ಕೊಟ್ಟಿರುವ ಸಲಹೆಯನ್ನೂ ಗಣನೆಗೆ ತೆಗೆದುಕೊಳ್ಳುತ್ತೇವೆ

ಹಾಗೂ ನಿಮ್ಮಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ, ಈ ಅನಿಷ್ಠ ಪದ್ಧತಿಯನ್ನು ತೊಡೆದು ಹಾಕುವ ಸಂದರ್ಭದಲ್ಲಿ ನಿಮ್ಮೆಲ್ಲರ ಸಹಕಾರವನ್ನು ಸರ್ಕಾರ ಕೋರುತ್ತದೆಂದು ನಾನು ತಿಳಿಸಬಯಸುತ್ತೇನೆ.

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ,

"2009ರ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು :– "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, 2009ರ ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಹೆಚ್.ಡಿ. ರೇವಣ್ಣ :- ಅಧ್ಯಕ್ಷರೆ, ದಯಮಾಡಿ ಉತ್ತರ ಕರ್ನಾಟಕದ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಿಕೊಡಿ. ಉಳಿದ ವಿಷಯವನ್ನು ಬೆಂಗಳೂರಿನಲ್ಲಿ ಅಧಿವೇಶನ ಕರೆದಾಗ ಚರ್ಚಿಸೋಣ. ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದಂತೆ ಯಾವುದಾದರೂ ಬಿಲ್ ಇದ್ದರೆ ಮಂಡಿಸಿ, ಚರ್ಚಿಸೋಣ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಅಧ್ಯಕ್ಷರೆ, ಸನ್ಮಾನ್ಯ ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶ ಕಲ್ಪಿಸಿಕೊಡಿ. ಇಲ್ಲವೇ ನಮ್ಮ ಭಾಗದ ಸಮಸ್ಯೆಗಳ ಬಗ್ಗೆಯಾದರೂ ನಾವು ಸರ್ಕಾರದ ಗಮನ ಸೆಳೆಯುತ್ತೇವೆ. ಇದಕ್ಕೆ ತಾವು ಅನುಮತಿ ಕೊಟ್ಟರೆ, ತಮಗೆ ಧನ್ಯವಾದಗಳನ್ನರ್ಪಿಸುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅಧ್ಯಕ್ಷರೆ, ಒಂದು ಗಮನ ಸೆಳೆಯುವ ಸೂಚನೆ ಇದೆ. ನಮಗೆ ಅಪರೂಪಕ್ಕೆ ಬಂದಿದೆ. ಇದು ಮುಗಿದ ನಂತರ ಉಳಿದುದನ್ನು ತೆಗೆದುಕೊಳ್ಳಿ.

2. ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಡಾ॥ ವಿ.ಎಸ್. ಆಚಾರ್ಯ (ಗೃಹ ಸಚಿವರು) (ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ) :- ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು